

‘ಮುಂದಿನ ವಾರ ಮಹಿಳಾ ಸಂಘದಲ್ಲಿ ನನ್ನ ಭಾಷಣ ಇದೆ. ಸಿದ್ಧವಾಗಬೇಕು... ನಾಲ್ಕೈದು ಸೀರೆಗಳಿಗೆ ಫಾಲ್ಸ್ ಹಾಕಿಸಬೇಕು, ಬ್ಲೌಸ್ ಕೊಡಲು ಟೈಲರ್ ಹತ್ರ ಹೋಗಲೇಬೇಕು... ಈ ಅವಾಂತರದಲ್ಲಿ ಇದನ್ನೆಲ್ಲಿ ದಾಟಿಸೋದೂ ರೀ’ ಎಂದು ಅರ್ಧ ಕೋಪದಿಂದ, ಇನ್ನರ್ಧ ದೈನ್ಯದಿಂದ ವಟಗುಟ್ಟಿದಳು. ಇದು ಪ್ರತಿವರ್ಷದ ಅವಳ ತಪ್ಪದ ವ್ಯಥೆ.

‘ಯಾಕಾದರೂ ಈ ಪಾಟಿ ಮಾವು ಬೆಳೀತೀರೋ, ನನ್ನ ಕರ್ಮ’ ಎಂದವಳೇ ಮೇಲೆದ್ದು ಸೀದಾ ಖಾಲಿಯಿದ್ದ ಮುಂದಿನ ಕೋಣೆಯುದ್ದಗಲಕ್ಕೂ ಪೇಪರ್‌ಗಳನ್ನು ಹಾಸಿ, ಬುಟ್ಟಿಯಲ್ಲಿದ್ದ ಹಸುರು ಮಾವಿನ ಕಾಯಿಗಳನ್ನು ಆಯ್ದು, ಅವುಗಳ ಮೇಲೆ ಹರಡಿದಳು. ಈ ಕೆಲಸ ಬರೋಬ್ಬರಿ ಒಂದು ಗಂಟೆಗೂ ಹೆಚ್ಚು ಹಿಡಿಯಿತು. ಭಾಳಾ ಹೊತ್ತು ಹಾಗೇ ಬಗ್ಗಿದವಳು ಮೇಲೇಳಹೋಗಿ ‘ಅಮ್ಮಾ’ ಎಂದು ನೋವಿನಿಂದ ಚೀರಿದಳು. ಶ್ರೀಕಂಠೂ ಹಾರಿಬಂದ ಗಾಬರಿಯಿಂದ.

‘ಅಯ್ಯೋ ರೀ ನನ್ನ ಬೆನ್ನು...’ ನೋವಿನಿಂದ ಪತರಗುಟ್ಟಿದಳು. ಮುಖ ವಿಕಾರ ಮಾಡಿದ ಅವಳನ್ನು, ಶ್ರೀಕಂಠು ಮೆಲ್ಲನೆ ನಡೆಸಿಕೊಂಡು ಬಂದು ಬೆಡ್ ರೂಮಿನ ಹಾಸಿಗೆ ಮೇಲೆ ಮಲಗಿಸಿದ. ‘ಹಾಂ ಹೂಂ’ಎಂದು ವರಲೋಕೆ ಶುರು ಮಾಡಿದ ಅವಳ ಬೆನ್ನಿಗೆ ‘ಮೂವ್’ ತಿಕ್ಕಿದ. ಉಹೂಂ... ಉಪ್ಪಿನ ಶಾಖ ಕೊಟ್ಟ. ನೋವು ಜಪ್ಪಯ್ಯ ಅನ್ನಲಿಲ್ಲ. ಕಮ್ಲೂ ನೋವಿನಿಂದ ಒಂದೇ ಸಮನೆ ಬೊಮ್ಮಡಿ ಹೊಡೆಯುತ್ತಲೇ ಇದ್ದಳು.

ಶ್ರೀಕಂಠೂಗೆ ದಿಕ್ಕು ತೋಚದೆ, ಹಿರಿಮಗನಿಗೆ ಫೋನ್ ಹಚ್ಚಿ ಮಹಡಿ ಮೇಲೆ ವರ್ಕ್ ಫ್ರಂ ಹೋಂನಲ್ಲಿದ್ದ ಮಗರಾಯನ ಸಹಾಯದಿಂದ ಡಾಕ್ಟರ್ ಹತ್ತಿರ ಕರೆದೊಯ್ದ. ಕೂಡಲೇ ಅವಳನ್ನು ಫಿಸಿಯೊಥೆರಪಿ ವಾರ್ಡ್‌ಗೆ ಸಾಗಿಸಿದರು. ಕರೆಂಟಿನ ವೈರುಗಳು ಅವಳ ಬೆನ್ನನ್ನು ಉಜ್ಜಿದವು. ಒಂದು ವಾರ ದಿನಾ ಬಂದು ಟ್ರೀಟ್ಮೆಂಟ್ ತೊಗೋಬೇಕು ಎಂದು ಫಿಸಿಯೊಥೆರಪಿಸ್ಟ್‌ನಿಂದ ಆರ್ಡರ್ ಆದ್ಮೇಲೆ, ವಿಧಿಯಿಲ್ಲದೇ, ಅವಳನ್ನು ಪ್ರತಿದಿನ ನರ್ಸಿಂಗ್ ಹೋಂಗೆ ಕರ್ಕೊಂಡು ಹೋಗಿಬರೋ ಕೆಲಸ ಶ್ರೀಕಂಠೂಗೇ ಅಂಟಿಕೊಳ್ತು.

ಒಂದು... ಎರಡು... ಮೂರು ದಿನ... ಕಮ್ಲೂಗೆ ನೋವು ಸ್ವಲ್ಪ ಕಡಿಮೆಯಾಯಿತು. ಆ ದಿನ ಮಲಗಿದ್ದವಳು ಥಟ್ಟನೆ ಏನೋ ನೆನಪಿಸಿಕೊಂಡು ಜೋರಾಗಿ ಕೂಗಿಕೊಂಡಳು. ಅವಳು ಅಥ್ಲೀಟ್ ಥರ ಜೋರಾಗಿ ಓಡಿಹೋಗಿ ಮುಂದಿನ ಕೋಣೆಯ ನೆಲದ ಮೇಲೆ ಹರಡಿದ್ದ ಮಾವಿನ ಹಣ್ಣಿನ ಸ್ಥಿತೀನ ಚೂಪುಗಣ್ಣಿಂದ ನೋಡಿ ‘ಅಯ್ಯೋ ಅಯ್ಯೋ...’ ಎಂದರಚಿಕೊಂಡಳು. ಅವಳ ಹೃದಯಾನೇ ಬಾಯಿಗೆ ಬಂದ್ಹಾಗಾಯ್ತು. ಪೇಪರ್ ಮೇಲೆ ರಸ ಕಾರಿಕೊಂಡು ಪಚಕ್ಕೆಂದು ನೆಲಕ್ಕೆ ಅಂಟಿಕೂತ ಕೆಲವು ಹಣ್ಣುಗಳ ದೈನ್ಯಾವಸ್ಥೆ ಕಂಡು ಹೌಹಾರಿ ಮುಟ್ಟಲು ಹೋದವಳು ‘ಇಸ್ಸಿ’ ಎಂದು ಕೈ ಕೊಡವಿಕೊಂಡಳು.

ಮೂರೇ ದಿನಗಳ ಕೆಳಗೆ ಹಸುರಿಗಿದ್ದ ಅವುಗಳ ಕೊಳೆತ ಅವಸ್ಥೆಗೆ ಸಂಕಟಪಡುತ್ತ ಮುಖ ಕಿವುಚಿದಳು. ಒಂದೆರಡನ್ನು ಅಲುಗಾಡಿಸಿ ನೋಡಿದಳು. ಹಳದಿ ಬಣ್ಣಕ್ಕೆ ತಿರುಗಿ ಸ್ವಲ್ಪ ಮೆತ್ತಗಾಗಿದ್ದವು. ಕೆಳಭಾಗದಲ್ಲಿ ಕಳಿತ–ಕೊಳೆತ ವಾಸನೆ. ಮುಖ ಸಿಂಡರಿಸಿಕೊಂಡು, ಗಟ್ಟಿಯಾಗಿರುವ ಮಾಗದವುಗಳನ್ನು ಹೊಸ ಪೇಪರಿನ ಮೇಲೆ ಮಗ್ಗುಲಾಗಿಸಿ, ಹಣ್ಣಾದವುಗಳನ್ನು ಬುಟ್ಟಿಗೆ ತುಂಬಿಸಿಟ್ಟಳು. ಕೊಳೆತ ರಾಶಿ ಹಣ್ಣುಗಳನ್ನು ನೋಡಿ ಹೊಟ್ಟೆಯುರಿದುಹೋಯಿತು. ದೊಡ್ಡ ಪ್ಲಾಸ್ಟಿಕ್ ಬಕೇಟು, ಮೊರ–ಪೊರಕೆ ಕೈಯಲ್ಲಿ ಹಿಡಿದು ಕೊಳೆತ ಹಣ್ಣುಗಳ ಶವಸಂಸ್ಕಾರಕ್ಕೆ ಸಿದ್ಧವಾದಳು.

ಮೊರಕ್ಕೆ ಪಿತಪಿತ ಹಣ್ಣುಗಳನ್ನೆಲ್ಲ ಗೋರಿಕೊಂಡು, ರಣರಂಪವಾದ ನೆಲದ ಬವಣೆ ನೋಡಿ ಕೋಪಿಸಿಕೊಂಡು, ‘ಇದೊಂದು ಚಾಕರಿ ಬೇರೆ ಬಾಕಿ ಇತ್ತು ನನ್ನ ಹಣೇಬರಕ್ಕೆ...’ ಎಂದು ಗೊಣಗುಟ್ಟಿಕೊಂಡು, ಕೊಳೆತ ಮೂರು ಬುಟ್ಟಿ ಹಣ್ಣುಗಳನ್ನು ಎತ್ತಿಕೊಂಡು ಹೋಗಿ ಸೀದಾ ಮನೆ ಮುಂದಿನ ಗಿಡಗಳ ಬುಡಗಳಿಗೆ ಸುರಿದುಬಂದಳು.

‘ಅಯ್ಯೋ ಕಷ್ಟಪಟ್ಟು ಬೆಳೆದದ್ದೆಲ್ಲ ಅನ್ಯಾಯವಾಗಿ ಗೊಬ್ಬರವಾಗೋಯ್ತಲ್ಲ’ ಎಂಬ ಕಿಚ್ಚು ಜಠರವನ್ನೆಲ್ಲ ವ್ಯಾಪಿಸಿ ಉರಿ ಕಾಣಿಸಿಕೊಂಡಿತು. ಲಕ್ಷಣವಾಗಿ ಕೆಮಿಕಲ್ಸ್ ಹಾಕಿ ಹಣ್ಣು ಮಾಡಿದರೆ ಒಂದೇ ದಿನಕ್ಕೆ ಹಣ್ಣಾಗತ್ತೆ, ಸುಲಭದ ಕೆಲಸ... ಯಾರಿಗೆ ಬೇಕು ಈ ಉಪದ್ವ್ಯಾಪ, ಆರ್ಗ್ಯಾನಿಕ್ ಅಂತೆ... ಸಹಜವಾಗಿ ಹಣ್ಣು ಮಾಡಬೇಕಂತೆ, ಇದರಲ್ಲಾಗೋ ವೇಸ್ಟು